# ವೀರಶೈವ ಲಿಂಗಾಯತ



ಧರ್ಮವು ಮನುಷ್ಯನ ಆಧ್ಯಾತ್ಮಿಕ ವಿಕಾಸಕ್ಕೆ ಒಂದು ಸೋಪಾನ. ಜೀವನದಲ್ಲಿ ಶಾಂತಿ, ಸಂಮೃದ್ಧಿ ಮತ್ತು ತೃಪ್ತಿಯನ್ನು ಅನುಭವಿಸುವ ಒಂದು ಮಾರ್ಗ. ಧರ್ಮಾಚರಣೆಯಲ್ಲಿ ಭಾರತ ವಿಶೇಷ ಸ್ಥಾನಮಾನವನ್ನು ಪಡೆದಿದೆ. ಇತ್ತೀಚಿನ ದಿನಗಳಲ್ಲಿ ಅತ್ಯಂತ ಚರ್ಚೆಗೆ ಒಳಪಟ್ಟ ಶಬ್ದಗಳು ವೀರಶೈವ ಮತ್ತು ಲಿಂಗಾಯತ. ಹಾಗದರೆ ಇವೆರಡು ಧರ್ಮಗಳು ಒಂದೆ ಅಥವಾ ಬೇರೆ ಬೇರೆ ಎನ್ನುವ ಚರ್ಚೆಯ ಒಂದು ಅವಲೋಕನ.

ಕರ್ನಾಟಕದ ಮಟ್ಟಿಗೆ ಬೌದ್ಧ, ಜೈನ, ವೈದಿಕ (ಆಗಮಿಕ) ಧರ್ಮಗಳಂತೆ ಶೈವವೂ ಒಂದು ವಲಸೆ ಧರ್ಮವಾಗಿದೆ. ಕಾಶ್ಮೀರ ಮೂಲದ ಇಪ್ಪತ್ತೆಂಟು ಆಗಮಗಳನ್ನು ಮನ್ನಿಸಿದ ಈ ಶೈವಧರ್ಮವು ಬಾದಾಮಿ ಚಾಲುಕ್ಯರ ಪೂರ್ವದಲ್ಲಿಯೇ ಕರ್ನಾಟಕವನ್ನು ಪ್ರವೇಶಿಸಿದ್ದಿತು. ಇವು ಇಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ನಡೆಸಿದ ಪರಸ್ಪರ ಹೋರಾಟದಲ್ಲಿ ಆತ್ಮವಾದಿಯಾದ ಜೈನ, ವೈದಿಕ (ಆಗಮಿಕ), ಶೈವಧರ್ಮಗಳು ಒಂದುಗೂಡಿ ಅನಾತ್ಮವಾದಿಯಾದ ಬೌದ್ಧಧರ್ಮವನ್ನು ಮೊದಲು ನಾಶಪಡಿಸಿದವು. ಬಳಿಕ ಆತ್ಮ–ಪರಮಾತ್ಮವಾದಿಯಾದ ವೈದಿಕ (ಆಗಮಿಕ), ಶೈವಧರ್ಮಗಳು ಒಂದುಗೂಡಿ ಕೇವಲ ಆತ್ಮವಾದಿಯಾಗಿದ್ದ ಜೈನಧರ್ಮವನ್ನು ದುರ್ಬಲಗೊಳಿಸಿದವು. ಆಮೇಲೆ ಪ್ರಭಲವಾಗಿ ಉಳಿದ ಎರಡರಲಿ ವೈದಿಕಧರ್ಮವು ಕ್ರಮೇಣ (ಆಗಮಿಕ) ಶೈವದಮೇಲೆ ಪ್ರಭಾವ ಬೀರಿ ಅದನ್ನು ಅರೆವೈದಿಕಗೊಳಿಸಿತು.

ಕರ್ನಾಟಕದ ಮಟ್ಟಿಗೆ ಬೌದ್ಧ, ಜೈನ, ವೈದಿಕ (ಆಗಮಿಕ) ಧರ್ಮಗಳಂತೆ ಶೈವವೂ ಒಂದು ವಲಸೆ ಧರ್ಮವಾಗಿದೆ. ಕಾಶ್ಮೀರ ಮೂಲದ ಇಪ್ಪತ್ತೆಂಟು ಆಗಮಗಳನ್ನು ಮನ್ನಿಸಿದ ಈ ಶೈವಧರ್ಮವು ಬಾದಾಮಿ ಚಾಲುಕ್ಯರ ಪೂರ್ವದಲ್ಲಿಯೇ ಕರ್ನಾಟಕವನ್ನು ಪ್ರವೇಶಿಸಿದ್ದಿತು. ಇವು ಇಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ನಡೆಸಿದ ಪರಸ್ಪರ ಹೋರಾಟದಲ್ಲಿ ಆತ್ಮವಾದಿಯಾದ ಜೈನ, ವೈದಿಕ (ಆಗಮಿಕ), ಶೈವಧರ್ಮಗಳು ಒಂದುಗೂಡಿ ಅನಾತ್ಮವಾದಿಯಾದ ಬೌದ್ಧಧರ್ಮವನ್ನು ಮೊದಲು ನಾಶಪಡಿಸಿದವು. ಬಳಿಕ ಆತ್ಮ–ಪರಮಾತ್ಮವಾದಿಯಾದ ವೈದಿಕ (ಆಗಮಿಕ), ಶೈವಧರ್ಮಗಳು ಒಂದುಗೂಡಿ ಕೇವಲ ಆತ್ಮವಾದಿಯಾಗಿದ್ದ ಜೈನಧರ್ಮವನ್ನು ದುರ್ಬಲಗೊಳಿಸಿದವು. ಆಮೇಲೆ ಪ್ರಭಲವಾಗಿ ಉಳಿದ ಎರಡರಲಿ ವೈದಿಕಧರ್ಮವು ಕ್ರಮೇಣ (ಆಗಮಿಕ) ಶೈವದಮೇಲೆ ಪ್ರಭಾವ ಬೀರಿ ಅದನ್ನು ಅರೆವೈದಿಕಗೊಳಿಸಿತು.



**Dr. Kumar Hadimani**
**skhadimani@gmail.com**

ಈ ಮೂರು ವಲಸೆ ಧರ್ಮಗಳು (ವೈದಿಕ, ಶೈವ, ಜೈನ) ನಮ್ಮ ನೆಲದ ಮೇಲೆ ತಮ್ಮ ತಮ್ಮ ದೇವತೆಗಳ ದೇವಾಲಯ ಸ್ಥಾಪಿಸಿ, ತೀರ್ಥಂಕರ ಬಸಿದಿ ನಿರ್ಮಿಸಿ ಅವುಗಳ ಒಳಹೊರಗೆ ತಮ್ಮ ರಾಮಾಯಣ – ಮಾಹಾಭಾರತ–ಜೈನಪುರಾಣ – ಶೈವಪೂರಾಣೋಕ್ತ ಘಟನೆಗಳ ಶಿಲ್ಪವನ್ನು ಕೆತ್ತಿದವು. ಈ ಧರ್ಮಗಳ ವ್ಯಸನಕ್ಕೊಳಗಾದ ಸ್ಥಳಿಯ ಕನ್ನಡಿಗರು ದೇವಾಲಯ – ಬಸಿದಿಗಳ ನಿರ್ಮಾಣ ನಿರ್ವಹಣೆಗಳಿಗಾಗಿ ದುಡಿದರು. ತಮ್ಮನ್ನು ಮುಟ್ಟಿಸಿಕೊಳ್ಳದಿದ್ದರು ಅವರ ಅರ್ಚಕರಿಗೆ ದಾನ, ಅಚಾರ್ಯರಿಗೆ ದಕ್ಷಿಣೆ ನೀಡಿ ಹುಸಿ ಧನ್ಯತಾಭಾವ ತಾಳಿದರು.

## ವೀರಶೈವ :

ಇಪ್ಪತ್ತೆಂಟು ಆಗಮಗಳನ್ನು ಮನ್ನಿಸಿದ ಈ ಶೈವಧರ್ಮವು ಕ್ರಮೇಣ ಪಾಶುಪತ, ಲಕುಲೀಶ (ಕಾಳಾಮುಖ), ಕಾಪಾಲಿಕ (ಮಹಾವ್ರತಿ), ಶ್ರೋತ್ರಿಯ ಶೈವ (ಶಿವಸಮಯ, ಶುದ್ಧಶೈವ) ಎಂಬ ನಾಲ್ಕು ಕವಲುಪಡೆಯಿತು. ಈ ಶ್ರೋತ್ರಿಯ ಶೈವದ ಸಾಮಾನ್ಯ ಶೈವ, ಮಿಶ್ರಶೈವ ಹಾಗು ಶುದ್ಧಶೈವಯೆಂಬ ಶಾಖೆಗಳಲ್ಲಿ "ವೀರಶೈವ" ಶಾಖೆಯು ಬಸವೊತ್ತರ ಕಾಲೀನ ಸೃಷ್ಟಿ. ಆದ್ದರಿಂದ ವೀರಶೈವವು ಶೈವ ಧರ್ಮದ ಒಂದು ವೃತ್ತೀಯೆ ಹೊರೆತು ಸ್ವತಂತ್ರ ಧರ್ಮವಲ್ಲ.

ಮೂಲತಃ ಆಂಧ್ರಪ್ರದೇಶದ ಶ್ರೋತ್ರಿಯ ಶೈವ ಆರಾಧ್ಯರು (ಚತುರಾಚಾರ್ಯರು) ಇಂದಿನ ವೀರಶೈವ ಪಂಚಪೀಠಾಧಿಪತಿಗಳು. ವೀರಶೈವ ಪಂಚಪೀಠಾಧಿಪತಿಗಳು

ಮೂಲತಃ ಚತುರಾಚಾರ್ಯರು ಯೆಂಬುದಕ್ಕೆ 1698ರಲ್ಲಿ ರಚಿತವಾದ "ಸಂಪಾದನೆಯ ಪರ್ವತೇಶನ ಚತುರಾರ್ಯರ ಚರಿತ್ರೆ" ಒಂದು ಉತ್ತಮ ಆಕಾರ ಸಾಕ್ಷಿ. ರಂಭಾಪುರಿಯ ರೇಣುಕ, ಉಜ್ಜಯನಿಯ ಮರುಳಸಿದ್ಧ, ಕೇದಾರದ ಭಿಮಾಶಂಕರ, ಶ್ರೀಶೈಲದ ಪಂಡಿತಾರಾಧ್ಯರೇ ಈ ಚತುರಾಚಾರ್ಯರು. ಇವರು 16ನೇ ಶತಮಾನದ ನಂತರ ತಮ್ಮ ಪ್ರಾಬಲ್ಯವನ್ನು ವಿಸ್ತರಿಸಿಕೊಳ್ಳುವ ನೆಪದಲ್ಲಿ ಐದನೆಯ ಪೀಠವನ್ನಾಗಿ ಕಾಶಿಯ ಪೀಠವನ್ನು ಸೃಷ್ಟಿಸಿಕೊಂಡರು. ಇದಕ್ಕೆ 'ಜ್ಞಾನ ಸಿಂಹಾಸನ ಪಿಠ' ಎಂದು ಹೆಸರಿಟ್ಟುಕೊಂಡರು.

15ನೇ ಮತ್ತು 16ನೇ ಶತಮಾನವನ್ನು ಲಿಂಗಾಯತ ಪುನರುಜ್ಜೀವನ ಕಾಲಯೇಂದು ಕರೆಯಲಾಗುತ್ತದೆ. ಯಾಕೆಂದರೆ ಚತುರಾಚಾರ್ಯರು ಅತ್ಯಂತ ಪ್ರವರ್ಧಮಾನಕ್ಕೆ ಬರುವ ಮೂಲಕ ತಮ್ಮನ್ನು ತಾವೇ ಜಗದ್ಗುರುಗಳೆಂದು ಕರೆದುಕೊಳ್ಳಲಾರಂಭಿಸಿದರು. ಯಾವಾಗ ಜಗದಾಚರ್ಯರು ಪಂಚಪೀಠಾಧಿಶ್ವರರಾದರೋ ಆಗ ಒಂದು ಧರ್ಮಗ್ರಂಥದ ಅವಶ್ಯಕತೆ ತಲೆದೋರಿತು, ಅದಕ್ಕಾಗಿ ಷಟ್ ಸ್ಥಲ ಮಾದರಿಯಲ್ಲಿ 101 ಸ್ಥಲಗಳು ಮತ್ತು ವೇದ, ಆಗಮ, ಶಾಸ್ತ್ರಗಳಲ್ಲಿನ ಅಂಶಗಳನ್ನು ಸೆರಿಸಿ "ಸಿದ್ಧಾಂತ ಶಿಖಾಮಣಿಃ" ಯೆಂಬ ಗ್ರಂಥ ಸೃಷ್ಠಿಯಾಯಿತು.

ಜಗದ್ಗುರು ರೇಣುಕಾಚಾರ್ಯರು ಲಿಂಗದಿಂದ ಉದ್ಭವಿಸಿ ವೀರಶೈವ ಧರ್ಮವನ್ನು ಸ್ಥಾಪಿಸಿರುವ ಬಗ್ಗೆ ಅಥವಾ ದ್ವಾಪರ ಯುಗದ ಪೂರ್ವದಲ್ಲಿ ಪ್ರಾರಂಭವಾದ ಧರ್ಮವೆನ್ನುವವಾದಕ್ಕೆ ಯಾವುದೆ ಪೂರಾವೆಗಳಿಲ್ಲ. ಮೇಲಾಗಿ ರಾಮಾಯಣ, ಮಹಾಭಾರತ, ವೇದ, ಆಗಮ, ಪುರಾಣಗಳಲ್ಲಿ ವೀರಶೈವ ಧರ್ಮ, ಸಿದ್ಧಾಂತ ಶಿಖಾಮಣಿಃ ಮತ್ತು ಪಂಚಾಚಾರ್ಯರ ಬಗ್ಗೆ ಉಲ್ಲೇಖವಿಲ್ಲಾ. ಬಸವೂತ್ತರ ಕಾಲದ ಇತಿಹಾಸಕಾರರಾದ ಪಾಲಗುರ್ಕಿ ಸೊಮನಾಥ, ಕೆರೆ ಪದ್ಮರಸ, ಕೆರೆ ಪದ್ಮನಾಂಕ, ಹರಿಹರ, ಚಾಮರಸ, ರಾಘವಾಂಕ ಮುಂತಾದವರು ರಚಿಸಿರುವ ಕಾವ್ಯ ಮತ್ತು ಕೃತಿಗಳಲ್ಲಿ ವೀರಶೈವ, ಸಿದ್ಧಾಂತ ಶಿಖಾಮಣಿಃ ಮತ್ತು ಪಂಚಾಚಾರ್ಯರ ಬಗ್ಗೆ ಗಮನಿಯವಾಗಿ ಕಂಡು ಬರುವದಿಲ್ಲ. ಇವು 15ನೇ ಮತ್ತು 16ನೇ ಶತಮಾನದಿಂದೀಚೆ ಪ್ರಚಲಿತದಲ್ಲಿ ಬಂದಿರುವ ಪದಗಳೆಂಬುದು ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬರುತ್ತದೆ.




## ಲಿಂಗಾಯತ:

ಬಸವ ಪೂರ್ವ ಯುಗದ ವಲಸೆ ಧರ್ಮಗಳ (ವೈದಿಕ, ಶೈವ) ಅನ್ಯಾಯ ಅತಿರೇಕ ಸಂಧರ್ಭದಲ್ಲಿ ಸ್ಥಳೀಯ ದುಡಿಯುವ ವರ್ಗಗಳಾದ ಕುರುಬ – ಅಂಬಿಗ–ಸಮಗಾರ–ಮಾದಿಗ–ಡೋಹರ–ಪಾಂಚಾಳ–ಅಗಸ–ಒಕ್ಕಲಿಗ ಮೊದಲಾದ ಸಮುದಾಯದ ಗಂಡು–ಹೆಣ್ಣುಗಳಲ್ಲಿ ಅಸ್ಮಿತೆಯನ್ನು ಜಾಗ್ರತೆಗೊಳಿಸಿ ಉತ್ತರಭಾರತದ ಧಾರ್ಮಿಕ ಯಜಮಾನ ಸಂಸ್ಕೃತಿಯ ವಿರುದ್ಧ (ಮುಖ್ಯವಾಗಿ ವೈದಿಕ ಶೈವಗಳ ವಿರುದ್ಧ) ಬಸವಣ್ಣ ಚಳುವಳಿ ಹೂಡಿದರು, ಇದರ ಪರಿಣಾಮವಾಗಿ:

**1. ದೇವತೆಗಳಿಲ್ಲ ದೇವರಿದ್ದಾನೆ**
**2. ಜಾತಿಗಳಿಲ್ಲ ವೃತ್ತಿ (ಕಾಯಕ) ಗಳಿವೆ**
**3. ಸ್ತ್ರೀ ಜಾತಿ ಪುರುಷ ಜಾತಿಗಳಿಲ್ಲ ಮನುಷ್ಯಜಾತಿ ಇದೆ**
**4. ವ್ಯಕ್ತಿವಾದ ಸೋಹಂ ಪೂರ್ಣಧರ್ಮವಲ್ಲ ಸಮಾಜವಾದಿ ದಾಸೋಹಂ ಪೂರ್ಣಧರ್ಮ**

ಇವೇ ಮೊದಲಾದ ಪರ್ಯಾಯ ಸಿದ್ಧಾಂತಗಳು ಸಮಾಜದಲ್ಲಿ ಸೃಷ್ಟಿಯಾದವು. ಇದರ ಫಲವಾಗಿ "ಲಿಂಗಾಯತ" ವೆಂಬ ಹೊಸ ಧರ್ಮ ಕನ್ನಡ ನಾಡಿನಲ್ಲಿ ಆಕಾರ ಪಡೆಯಿತು.

ಶ್ರೇಣಿಕೃತವಿಲ್ಲದ, ಬೇಧ ಭಾವ ವಿಲ್ಲದ ಜಾತ್ಯಾತೀತ ನಿಲುವಿನ ಮುಕ್ತ ದಯಪರ ನಿಲುವಿನ ಶ್ರೇಷ್ಠ ಧರ್ಮ ಸಮತೆಯ ಧರ್ಮ. ಕಾಯಕ ದಾಸೋಹ ಸಿದ್ಧಾಂತಗಳ ಆಧಾರದ ಮೇಲೆ ಪ್ರಾಣಿ ಪಶು ಪಕ್ಷಿಗಳನ್ನು ಒಳಗೊಂಡ ಸಕಲ ಜೀವಾತ್ಮರನ್ನು ಪ್ರೀತಿಸಿದ ಅನುಪಮ ಆಚರಣೆಯ ವಿಶಿಷ್ಟ ಧರ್ಮವಾಗಿದೆ.

ಅಷ್ಟಾವರ್ಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್ ಸ್ಥಲವೆ ಆತ್ಮವಾಗಿ ಇಷ್ಟಲಿಂಗ ಏಕದೇವೋಪಾಸನೆಯಾಗಿ ಅಧ್ಯಾತ್ಮ ಜಗತ್ತಿನಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು.
**ಆದಿ ಬಸವಣ್ಣ ಅನಾದಿ ಲಿಂಗವೆಂದೆಂಬರು;**
**ಹುಸಿ, ಹುಸಿ, ಈ ನುಡಿಯ ಕೇಳಲಾಗದು.**

ಆದಿ ಲಿಂಗ, ಅನಾದಿ ಬಸವಣ್ಣನು.
**ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು,**
**ಜಂಗಮವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು,**
**ಪ್ರಸಾದವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು,**
**ಇಂತೀ ತ್ರಿವಿಧಕ್ಕೆ ಬಸವಣ್ಣನೇ ಕಾರಣವೆಂದರಿದೆನಯ್ಯ**
**ಕೂಡಲಚೆನ್ನಸಂಗಮದೇವಯ್ಯ**

ಎಂದು ಹೇಳುವ ಮೂಲಕ ಬಸವಣ್ಣನವರೇ ಇಷ್ಟಲಿಂಗದ ಜನಕರೆಂಬುದನ್ನು ಚನ್ನಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ.


ಉಲ್ಲೇಖಗಳು :

1. ಡಾ. ಎಂ. ಎಂ. ಕಲಬುರ್ಗಿ, "ಮಾರ್ಗ", ಸಂಪುಟ 1 – 7
2. ಪಂಡಿತ ಡಿ. ಸಿದ್ದಗಂಗಯ್ಯ, "ಸಿದ್ಧಾಂತ ಶಿಖಾಮಣಿಃ"
3. ಡಾ. ಎಂ. ಎಂ. ಕಲಬುರ್ಗಿ, "ಶಾಸನಗಳಲ್ಲಿ ಶರಣರು" ಮತ್ತು ಸಂಶೋಧನೆ ಪ್ರಕಟಣೆಗಳು
4. ಆರ್ಥರ್ ಮೈಲ್ಸ್., "ದ ಲ್ಯಾಂಡ ಆಫ್ ಲಿಂಗಮ"
5. ರಮಜಾನ ದರ್ಗಾ., "ಶರಣರ ಸಮಗ್ರಕ್ರಾಂತಿ"
6. ಧಾರ್ಮಿಕ ಮುಖಂಡರು ಮತ್ತು ಭಾಷಾ ತಜ್ಞರೊಂದಿಗೆ ಸಂಭಾಷಣೆ


ಬಸವಣ್ಣನವರ ಲಿಂಗಾಯತ ಧರ್ಮ ಮತ್ತು ಪಂಚಾಚಾರ್ಯರ ವೀರಶೈವ ಧರ್ಮಗಳು ತದ್ವಿರುದ್ಧವಾಗಿವೆ ಎಂಬುದನ್ನು ಕೆಳಗೆ ತಿಳಿಸಿದ ಅಂಶಗಳಿಂದ ತಿಳಿದುಕೊಳ್ಳಬಹುದು.

| | ಲಿಂಗಾಯತರು | ವೀರಶೈವರು |
|---|---|---|
| **ಧರ್ಮಗುರು** | ಬಸವಣ್ಣನವರು | ಸ್ಥಾವರ ಲಿಂಗೋದ್ಭವರಾದ ರೇಣುಕಾಚಾರ್ಯರು |
| **ಪೂಜೆ** | ಏಕದೇವೋಪಾಸಕರು, ಇಷ್ಟಲಿಂಗ ಯೋಗ ಪೂಜಾವಿಧಾನ (ಮೂರ್ತಿ ಪೂಜೆಇಲ್ಲ) | ಬಹುದೇವೋಪಾಸಕರು ಹಾಗು ಮೂರ್ತಿಪೂಜಕರು |
| **ಗುರು** | ಅರಿವೇ ಗುರು | ಪಂಚಾಚಾರ್ಯರು |
| **ಧರ್ಮಗ್ರಂಥ** | ವಚನ ಸಂಪುಟ | ಸಿದ್ಧಾಂತ ಶಿಖಾಮಣಿಃ |
| **ನಾಯಕರು** | 770 ಅಮರಗಣಂಗಳೆಲ್ಲ ನಾಯಕರು | ಅಮರಗಣಂಗಳನ್ನು ಪರಿಗಣಿಸುವದಿಲ್ಲ |
| **ಸಂಪ್ರದಾಯ** | ವಚನ ಸಂಪ್ರದಾಯ | ವೈದಿಕ ಆಗಮಿಕ ಸಂಪ್ರದಾಯ |
| **ಸಿದ್ಧಾಂತ** | ಕಾಯಕ ಸಿದ್ಧಾಂತ<br>ಬಸವಾದ್ವೈತ (ಶಕ್ತಿವಿಷಿಷ್ಟ ಅದ್ವೈತ) | ಕರ್ಮ ಸಿದ್ಧಾಂತ<br>ದ್ವೈತ ಸಿದ್ಧಾಂತ |
| **ಸಂಸ್ಕೃತಿ** | ಅನುಭವ ಮಂಟಪ, ಮಹಾಮನೆ ಸಂಸ್ಕೃತಿ | ದೇವಾಲಯ, ಮಠ, ಮಂದಿರಗಳ ಸಂಸ್ಕೃತಿ |
| **ಪದ್ಧತಿ** | ಜಾತಿರಹಿತ ಜಂಗಮ ಪದ್ಧತಿ | ಜಾತಿ ಜಂಗಮ ಪದ್ಧತಿ |
| **ಸಮಾನತೆ** | ಜಾತಿ, ಕುಲ, ಗೋತ್ರ ಮಿರಿದ ಧರ್ಮ, ಎಲ್ಲರಿಗು ಸಮಾನಹಕ್ಕು | ಜಾತಿ ಮೇಲು ಕೀಳುಗಳಿವೆ, ಎಲ್ಲರು ಸಮಾನರಲ್ಲ, ಸ್ತ್ರೀಯರಿಗೆ ಸಮಾನ ಹಕ್ಕಿಲ್ಲ |
| **ಪರಂಪರೆ** | "ಅರಿವೇ ಗುರು", ಎನಗಿಂತ ಕಿರಿಯರಿಲ್ಲ | ಗುರು, ಭಕ್ತ ಬೇರೆ ಬೇರೆ, ಭಕ್ತ ಗುರುವಿನ ಗುಲಾಮನಾಗಿರಬೇಕು. ಗುರುವೇ ದೊಡ್ಡವರು ಉಳಿದವರೆಲ್ಲ ಕಿರಿಯರು |
| **ನಂಬಿಕೆ** | ಸ್ವರ್ಗ, ನರಕ, ಮೂಢನಂಬಿಕೆ, ಜೋತಿಷ್ಯ ಮತ್ತು ಪಂಚಾಂಗ ಗಳನ್ನು ನಂಬುವದಿಲ್ಲಾ (ಆಚಾರವೇ ಸ್ವರ್ಗ, ಅನಾಚಾರವೇ ನರಕ) | ಸ್ವರ್ಗ, ನರಕ, ಮೂಢನಂಬಿಕೆ, ಜೋತಿಷ್ಯ ಮತ್ತು ಪಂಚಾಂಗ ಗಳನ್ನು ನಂಬುತ್ತಾರೆ |
| **ಸೂತಕ** | ಪಂಚಸೂತಕಗಳಿಲ್ಲ | ಪಂಚಸೂತಕಗಳಿವೆ |
| **ಆಚರಣೆಗಳು** | ಹೋಮ, ಹವನ ಮತ್ತು ವೇದಘೋಶಗಳಿಲ್ಲ | ಹೋಮ, ಹವನ ಮತ್ತು ವೇದಘೋಶಗಳಿವೆ |
| **ಉತ್ಸವ** | ಅಡ್ಡಪಲ್ಲಕ್ಕಿ, ಉದ್ದಪಲ್ಲಕ್ಕಿ ಉತ್ಸವಗಳಿಲ್ಲ | ಅಡ್ಡಪಲ್ಲಕ್ಕಿ, ಉದ್ದಪಲ್ಲಕ್ಕಿ ಉತ್ಸವಗಳಿವೆ |

ಅವೈದಿಕ ಲಿಂಗಾಯತ ಮತ್ತು ವೈದಿಕ ವೀರಶೈವ ಧರ್ಮಗಳು ತದ್ವಿರುದ್ಧ ಸಿದ್ಧಾಂತಗಳ ಮೇಲೆ ನಿಂತಿರುವದರಿಂದ ನಮ್ಮ ಧಾರ್ಮಿಕ, ತಾತ್ವಿಕ, ಸೈದ್ಧಾಂತಿಕ ಆಚರಣೆಗಳಲ್ಲಿಯ ಸ್ಪಷ್ಟತೆ ಅನಿವಾರ್ಯ ಮತ್ತು ನಮ್ಮೆಲ್ಲರ ಜವಬ್ದಾರಿಯು ಆಗಿದೆ.